# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶನಿವಾರ, ೧೯, ಅಕ್ಟೋಬರ್, ೨೦೨೪(ಆಶ್ವಯುಜ, ೨೭, ಶಕವರ್ಷ, ೧೯೪೬)<br>BENGALURU, SATURDAY, 19, OCTOBER, 2024(AASHWAYUJA, 27, SHAKAVARSHA, 1946) | ನಂ. ೪೮೦<br>No. 480 |
|---|---|---|


## DEPARTMENT OF PARLIAMENTARY AFFAIRS AND LEGISLATION SECRETARIAT

## NOTIFICATION

**NO: DPAL 24 SHASANA 2023, BENGALURU, DATED:19.10.2024**

The Registration (Karnataka Amendment) Bill, 2023 ಇದಕ್ಕೆ 2024ರ ಅಕ್ಟೋಬರ್ ತಿಂಗಳ 8ನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2024ರ ಕರ್ನಾಟಕ ಅಧಿನಿಯಮ ಸಂಖ್ಯೆ: 47 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**KARNATAKA ACT NO. 47 OF 2024**

(First Published in the Karnataka Gazette Extra-ordinary on the 19th day of October 2024)

**THE REGISTRATION (KARNATAKA AMENDMENT) ACT, 2023**

(Received the assent of the President on the 8th day of October, 2024)

An Act further to amend the Registration Act, 1908 (Central Act 16 of 1908) in its application to the State of Karnataka.

Whereas, it is expedient further to amend the Registration Act, 1908 (Central Act 16 of 1908) in its application to the State of Karnataka for the purposes hereinafter appearing;

Be it enacted by the Karnataka State Legislature in the Seventy fourth Year of the Republic of India, as follows:-

**1. Short title and commencement.**- (1) This Act may be called the Registration (Karnataka Amendment) Act, 2023.

(2) It shall come into force on such date as the State Government may by notification in the Official Gazette, appoint.

**2. Amendment of section 2.**- In section 2 of the Registration Act, 1908 (Central Act 16 of 1908), (hereinafter referred to as the principal Act), after clause (10), the following shall be inserted, namely:-

"**(11) "Forged document"** shall have the same meaning as assigned to it in section 470 of the Indian Penal Code, 1860 (Central Act No. 45 of 1860)."

**3. Insertion of new sections 22-B, 22-C and 22-D.**- In the Principal Act, after section 22A, the following shall be inserted, namely:-

"**22-B. Refusal to register forged documents and other documents prohibited by law.**- Notwithstanding anything contained in this Act, the registering officer shall refuse to register the following documents, namely:-

(1) forged document;

(2) document relating to transaction, which is prohibited by any Central Act or State Act for the time being in force;

(3) document relating to transfer of immovable property by way of sale, gift, lease or otherwise, which is attached permanently or provisionally by a competent authority under any Central Act or State Act for the time being in force or any Court or Tribunal;

(4) any other document as the State Government may, by notification, specify.

**Explanation.**-

(a) "Forged document" shall have the same meaning as assigned to it in section 470 of the Indian Penal Code, 1860.

(b) For the purpose of considering the case of forged documents the cases involving question of title will be excluded.

**22-C. Cancellation of registered documents in certain cases.**- The District Registrar either suo motu or on a complaint received from any aggrieved person is of the opinion, that registration of a document is made in contravention of section 22-B shall issue a notice to the executants and all the parties to the document and parties to subsequent documents, if any, and all other persons who, in the opinion of the District Registrar, may be affected by the cancellation of the document, to show cause as to why the registration of the document shall not be cancelled. On consideration of reply, if any received therefor, the District Registrar may cancel the registration of the document and cause to enter such cancellation in the relevant books and indexes.

**Explanation.**-

(a) "Aggrieved person" means and includes any person being affected by the execution of the document and includes any party whose personal, property, or financial interests or rights are impacted by another's action and further in case of registration of a document pertaining to Government property includes any general public as the case may be.

(b) For determining the complaint the provision of Limitation Act as specified under Indian Limitation Act including the power to condone the delay in appropriate case on showing sufficient cause is entrusted upon the District Registrar or Appellate authority.

**22-D. Appeal.-** Any person aggrieved by an order of the District Registrar under section 22-C may prefer an appeal to the Inspector General of Registration within thirty days from the date of cancellation of the document and the Inspector General of Registration shall pass an order confirming, modifying or cancelling the order of the District Registrar."

**4. Amendment of section 69.-** In the principal Act, in section 69, in sub-section (1), after clause (l), the following shall be inserted, namely:-

"(m) regulating the process of cancellation of a registered document referred to in section 22-C."

**5. Insertion of new sections 81-A and 81-B.-** In the Principal Act, after section 81, the following shall be inserted, namely:-

"**81-A. Penalty for registering documents in contravention of section 22-B.-** (1) Every registering officer appointed under this Act and every person employed in his office for the purposes of this Act, who, being charged with registering the documents presented for registration under this Act, registers documents in contravention of the provisions of section 22-B, shall be punishable with imprisonment for a term which may be extend up to three years, or with fine, or with both.

(2) Nothing contained in this section shall apply in the case of registration of a document made in good faith.

**Explanation.-** For the purpose of this sub-section, the expression "good faith" means any act believed or done by a person in good faith with due care, caution and sense of responsibility or by mistake of fact believing himself justified by law under section 79 of the Indian Penal Code, 1860.

**81-B. Offences by companies.-** (1) Where an offence under this Act has been committed, by a company, every person who, at the time the offence was committed, was in-charge of, and was responsible to, the company for the conduct of the business of the company, as well as the company, shall be deemed to be guilty of the offence and shall be liable to be proceeded against and punished accordingly:

Provided that, nothing contained in sub-section (1) shall render any such person liable to any punishment, if he proves that the offence was committed without his knowledge or that he had exercised all due diligence to prevent the commission of such offence.

(2) Notwithstanding anything contained in sub-section (1), where any offence under this Act has been committed by a company and it is proved that the offence, has been committed with the consent or connivance of, or is attributable to, any neglect on the part of any director, manager, secretary or other officer of the company, such director, manager, secretary or other officer shall be deemed to be guilty of that offence and shall be, liable to be proceeded against and punished accordingly.

**Explanation.**- For the purposes of this section,-

(a) "company" means any body corporate and includes a firm or other association of individuals; and

(b) "director" in relation to a firm means a partner in the firm".

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**
**ಅಧಿಸೂಚನೆ**
**ಸಂಖ್ಯೆ: ಸಂವ್ಯಶಾಇ 24 ಶಾಸನ 2023, ಬೆಂಗಳೂರು, ದಿನಾಂಕ:19.10.2024.**

The Kannada Language Comprehensive Development Act, 2022 (Karnataka Act No. 13 of 2023)ರ ಪ್ರಕರಣ 6 ರಡಿಯಲ್ಲಿ ರಾಷ್ಟ್ರಪತಿಯವರಿಂದ ಅಧಿಕೃತಗೊಳಿಸಿದ the Registration (Karnataka Amendment) Act, 2023 (Karnataka Act 47 of 2024) ರ ಕನ್ನಡ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2024ರ ಕರ್ನಾಟಕ ಅಧಿನಿಯಮ ಸಂಖ್ಯೆ:47**

(2024 ರ ಅಕ್ಟೋಬರ್ ತಿಂಗಳ 19ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ನೋಂದಣಿ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2023**

(2024 ರ ಅಕ್ಟೋಬರ್ ತಿಂಗಳ 08 ನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16) ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ನೋಂದಣಿ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16) (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 2ನೇ ಪ್ರಕರಣದಲ್ಲಿನ ಖಂಡ (10)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(11) "**ಸುಳ್ಳು ಸೃಷ್ಟನೆಯ ದಸ್ತಾವೇಜು**" ಎಂಬ ಪದವು, ಭಾರತ ದಂಡ ಸಂಹಿತೆ, 1860 (1860ರ ಕೇಂದ್ರ ಅಧಿನಿಯಮ ಸಂ.45)ರ 470ನೇ ಪ್ರಕರಣದಲ್ಲಿ ಅದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

**3. ಹೊಸ ಪ್ರಕರಣ 22-ಬಿ, 22-ಸಿ ಮತ್ತು 22-ಡಿಯ ಸೇರ್ಪಡೆ.-** ಮೂಲ ಅಧಿನಿಯಮದಲ್ಲಿನ 22-ಎ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**22-ಬಿ. ಸುಳ್ಳು ಸೃಷ್ಟನೆಯ ದಸ್ತಾವೇಜುಗಳನ್ನು ಹಾಗೂ ಕಾನೂನಿನ ಮೂಲಕ ನಿಷೇಧಿಸಲಾದ ಇತರೆ ದಸ್ತಾವೇಜುಗಳನ್ನು ನೋಂದಣಿ ಮಾಡಲು ನಿರಾಕರಣೆ.-** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ ನೋಂದಣಿ ಅಧಿಕಾರಿಯು ಈ ಕೆಳಕಂಡ ದಸ್ತಾವೇಜುಗಳನ್ನು ನೋಂದಣಿ ಮಾಡಲು ನಿರಾಕರಿಸತಕ್ಕದ್ದು, ಎಂದರೆ:-

(1) ಸುಳ್ಳು ಸೃಷ್ಟನೆ ದಸ್ತಾವೇಜು;

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕೇಂದ್ರ ಅಧಿನಿಯಮ ಅಥವಾ ರಾಜ್ಯ ಅಧಿನಿಯಮದ ಮೂಲಕ ನಿಷೇಧಿಸಲಾಗಿದ್ದ ವ್ಯವಹರಣೆಗೆ ಸಂಬಂಧಿಸಿದ ದಸ್ತಾವೇಜು;

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕೇಂದ್ರ ಅಧಿನಿಯಮ ಅಥವಾ ರಾಜ್ಯ ಅಧಿನಿಯಮದ ಅಡಿಯಲ್ಲಿ ಸಕ್ಷಮ ಪ್ರಾಧಿಕಾರಿಯು ಅಥವಾ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು ಶಾಶ್ವತವಾಗಿ ಅಥವಾ ತಾತ್ಕಾಲಿಕವಾಗಿ ಜಪ್ತಿ ಮಾಡಲಾಗಿದ್ದ ಯಾವುದೇ ಸ್ವತ್ತನ್ನು ಮಾರಾಟ, ದೇಣಿಗೆ, ಗೇಣಿ ಅಥವಾ ಇತರ ರೂಪದಲ್ಲಿ ವರ್ಗಾವಣೆ ಮಾಡುವುದಕ್ಕೆ ಸಂಬಂಧಿಸಿರುವ ದಸ್ತಾವೇಜು;

(4) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ದಸ್ತಾವೇಜು.

**ವಿವರಣೆ:-**

(ಎ) "ಸುಳ್ಳು ಸೃಷ್ಟನೆಯ ದಸ್ತಾವೇಜು" ಎಂಬ ಪದಾವಳಿಯು ಭಾರತ ದಂಡ ಸಂಹಿತೆ, 1860ರ 470ನೇ ಪ್ರಕರಣದಲ್ಲಿ ಅವುಗಳಿಗೆ ಗೊತ್ತುಪಡಿಸಲಾದ ಅರ್ಥವನ್ನೇ ಹೊಂದಿರತಕ್ಕದ್ದು.

(ಬಿ) ಸುಳ್ಳು ಸೃಷ್ಟನೆಯ ದಸ್ತಾವೇಜುಗಳ ಪ್ರಕರಣವನ್ನು ಪರಿಗಣಿಸುವ ಉದ್ದೇಶಕ್ಕಾಗಿ, ಹಕ್ಕು ಸ್ವಾಮ್ಯ ಪ್ರಶ್ನೆಯನ್ನು ಒಳಗೊಂಡಿರುವ ಪ್ರಕರಣಗಳನ್ನು ಹೊರತುಪಡಿಸುವುದು.

**22-ಸಿ. ಕೆಲವು ಪ್ರಕರಣಗಳಲ್ಲಿ ನೋಂದಣಿ ಮಾಡಲಾದ ದಸ್ತಾವೇಜುಗಳ ರದ್ದತಿ.-** ಜಿಲ್ಲಾ ನೋಂದಣಾಧಿಕಾರಿಯು ಸ್ವಯಂ ಪ್ರೇರಣೆಯಿಂದಾಗಲಿ ಅಥವಾ ಯಾರೇ ಬಾಧಿತ ವ್ಯಕ್ತಿಯಿಂದ ಪಡೆದ ದೂರಿನ ಮೇಲಾಗಲಿ 22-ಬಿ ಪ್ರಕರಣವನ್ನು ಉಲ್ಲಂಘಿಸಿ ದಸ್ತಾವೇಜಿನ ನೋಂದಣಿ ಮಾಡಲಾಗಿದೆಯೆಂದು ಅಭಿಪ್ರಾಯಪಟ್ಟರೆ, ಆತನು ಬರೆದುಕೊಟ್ಟವರಿಗೆ ಮತ್ತು ದಸ್ತಾವೇಜಿನ ಎಲ್ಲಾ ಪಕ್ಷಕಾರರಿಗೆ ತರುವಾಯದ ದಸ್ತಾವೇಜುಗಳು ಯಾವುದಾದರೂ ಇದ್ದರೆ

ಅವುಗಳ ಪಕ್ಷಕಾರರಿಗೆ ಮತ್ತು ಜಿಲ್ಲಾ ನೋಂದಣಾಧಿಕಾರಿಯ ಅಭಿಪ್ರಾಯದಲ್ಲಿ ದಸ್ತಾವೇಜಿನ ನೋಂದಣಿಯನ್ನು ರದ್ದುಮಾಡುವುದರಿಂದ ಬಾಧಿತವಾಗಬಹುದಾದ ಎಲ್ಲಾ ಇತರೆ ವ್ಯಕ್ತಿಗಳಿಗೆ ದಸ್ತಾವೇಜಿನ ನೋಂದಣಿಯನ್ನು ಏಕೆ ರದ್ದುಮಾಡಬಾರದೆಂದು ಕಾರಣ ಕೇಳಿ ನೋಟೀಸನ್ನು ನೀಡತಕ್ಕದ್ದು. ಅದಕ್ಕಾಗಿ ಯಾವುದೇ ಉತ್ತರವನ್ನು ಸ್ವೀಕರಿಸಿದರೆ ಅದನ್ನು ಪರಿಗಣಿಸಿದ ತರುವಾಯ ಜಿಲ್ಲಾ ನೋಂದಣಾಧಿಕಾರಿಯು, ದಸ್ತಾವೇಜಿನ ನೋಂದಣಿಯನ್ನು ರದ್ದುಗೊಳಿಸಬಹುದು ಮತ್ತು ಸಂಬಂಧಪಟ್ಟ ಪುಸ್ತಕಗಳು ಹಾಗೂ ಸೂಚಿಗಳಲ್ಲಿ ಅಂಥ ರದ್ದತಿಯ ಬಗ್ಗೆ ನಮೂದು ಮಾಡುವಂತೆ ಮಾಡತಕ್ಕದ್ದು.

**ವಿವರಣೆ**:-

(ಎ) "ಬಾಧಿತ ವ್ಯಕ್ತಿ" ಎಂದರೆ ದಸ್ತಾವೇಜಿನ ಅಮಲ್ಜಾರಿಯಿಂದ ಬಾಧಿತನಾಗುವ ಯಾರೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ ಮತ್ತು ಇನ್ನೊಬ್ಬರ ಕ್ರಮದಿಂದ ಮತ್ತು ಸಂದರ್ಭಾನುಸಾರ, ಯಾರೇ ಸಾಮಾನ್ಯ ವ್ಯಕ್ತಿಯನ್ನು ಒಳಗೊಂಡು ಸರ್ಕಾರದ ಸ್ವತ್ತಿಗೆ ಸಂಬಂಧಿಸಿದಂತೆ ದಸ್ತಾವೇಜಿನ ನೋಂದಣಿಯ ಸಂದರ್ಭದಲ್ಲಿ ಯಾರ ವೈಯಕ್ತಿಕ, ಸ್ವತ್ತಿನ, ಅಥವಾ ಹಣಕಾಸಿನ ಹಿತಾಸಕ್ತಿಗಳು ಅಥವಾ ಹಕ್ಕುಗಳು ಬಾಧಿತವಾಗಿವೆಯೋ ಆ ಯಾರೇ ಪಕ್ಷಕಾರನನ್ನು ಒಳಗೊಳ್ಳುತ್ತದೆ.

(ಬಿ) ದೂರನ್ನು ನಿರ್ಧರಿಸುವುದಕ್ಕಾಗಿ ಸಮುಚಿತ ಪ್ರಕರಣದಲ್ಲಿ ಸಾಕಷ್ಟು ಕಾರಣವನ್ನು ತೋರಿಸಿದ ಮೇಲೆ ವಿಳಂಬವನ್ನು ಮನ್ನಾ ಮಾಡುವ ಅಧಿಕಾರವೂ ಸೇರಿದಂತೆ ಭಾರತೀಯ ಕಾಲಮಿತಿ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಕಾಲಮಿತಿ ಅಧಿನಿಯಮದ ಉಪಬಂಧವನ್ನು ಜಿಲ್ಲಾ ನೋಂದಣಾಧಿಕಾರಿ ಅಥವಾ ಅಪೀಲು ಪ್ರಾಧಿಕಾರಿಗೆ ವಹಿಸಲಾಗಿದೆ.

**22-ಡಿ. ಅಪೀಲು.-** 22-ಸಿ ಪ್ರಕರಣದಡಿಯಲ್ಲಿ ಜಿಲ್ಲಾ ನೋಂದಣಾಧಿಕಾರಿಯ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ದಸ್ತಾವೇಜಿನ ರದ್ದತಿಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ನೋಂದಣಿ ಮಹಾ ಪರಿವೀಕ್ಷಕರಿಗೆ ಅಪೀಲನ್ನು ಸಲ್ಲಿಸಬಹುದು ಮತ್ತು ನೋಂದಣಿ ಮಹಾ ಪರಿವೀಕ್ಷಕರು ಜಿಲ್ಲಾ ನೋಂದಣಾಧಿಕಾರಿಯ ಆದೇಶವನ್ನು ಸ್ಥಿರೀಕರಿಸಿ, ಮಾರ್ಪಡಿಸಿ ಅಥವಾ ರದ್ದುಗೊಳಿಸಿ ಆದೇಶವನ್ನು ಹೊರಡಿಸತಕ್ಕದ್ದು."

**4. ಪ್ರಕರಣ 69ರ ತಿದ್ದುಪಡಿ.-** ಮೂಲ ಅಧಿನಿಯಮದ 69ನೇ ಪ್ರಕರಣದಲ್ಲಿನ (1)ನೇ ಉಪಪ್ರಕರಣದಲ್ಲಿನ ಖಂಡ (ಎಲ್)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎಂ) ಪ್ರಕರಣ 22-ಸಿ ರಲ್ಲಿ ಉಲ್ಲೇಖಿಸಲಾದ ನೋಂದಾಯಿತ ದಸ್ತಾವೇಜಿನ ರದ್ದತಿಯ ಕಾರ್ಯವಿಧಾನವನ್ನು ನಿಯಂತ್ರಿಸುವುದು."

**5. 81-ಎ ಮತ್ತು 81-ಬಿ ಹೊಸ ಪ್ರಕರಣಗಳ ಸೇರ್ಪಡೆ.-** ಮೂಲ ಅಧಿನಿಯಮದ 81ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"81-ಎ. ಪ್ರಕರಣ 22-ಬಿಯನ್ನು ಉಲ್ಲಂಘಿಸಿದ ದಸ್ತಾವೇಜುಗಳ ನೋಂದಣಿಗಾಗಿ ದಂಡನೆ.-(1)** ಈ ಅಧಿನಿಯಮದಡಿಯಲ್ಲಿ ನೇಮಕಗೊಂಡ ಪ್ರತಿಯೊಬ್ಬ ನೋಂದಣಾಧಿಕಾರಿಯು ಮತ್ತು ಈ ಅಧಿನಿಯಮದಡಿಯಲ್ಲಿ ನೋಂದಣಿಗಾಗಿ ಹಾಜರುಪಡಿಸಲಾದ ದಸ್ತಾವೇಜುಗಳ ನೋಂದಣಿ ಮಾಡುವ ಪ್ರಭಾರವನ್ನು ಹೊಂದಿರುವ, ಈ ಅಧಿನಿಯಮದ ಉದ್ದೇಶಗಳಿಗಾಗಿ ತನ್ನ ಕಚೇರಿಯಲ್ಲಿ ನಿಯೋಜನೆಗೊಂಡಿರುವ ಪ್ರತಿಯೊಬ್ಬ ವ್ಯಕ್ತಿಯು 22-ಬಿ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ದಸ್ತಾವೇಜುಗಳನ್ನು ನೋಂದಣಿ ಮಾಡಿರುವಲ್ಲಿ ಅವರು ಮೂರು

ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಈ ಪ್ರಕರಣದಲ್ಲಿ ಏನೇ ಇದ್ದರೂ ಸದ್ಭಾವನೆಯಿಂದ ಮಾಡಲಾದ ದಸ್ತಾವೇಜಿನ ನೋಂದಣಿ ಸಂದರ್ಭದಲ್ಲಿ ಅನ್ವಯವಾಗತಕ್ಕದ್ದಲ್ಲ.

**ವಿವರಣೆ:-** ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ಸದ್ಭಾವನೆ" ಎಂದರೆ, ಒಬ್ಬ ವ್ಯಕ್ತಿಯು ಯುಕ್ತ ಜಾಗರೂಕತೆ, ಎಚ್ಚರಿಕೆ ಮತ್ತು ಜವಾಬ್ದಾರಿ ಪ್ರಜ್ಞೆಯಿಂದ ಸದ್ಭಾವನೆಯಲ್ಲಿ ಅಥವಾ ಭಾರತ ದಂಡ ಸಂಹಿತೆ, 1860ರ 79ನೇ ಪ್ರಕರಣದ ಅಡಿಯಲ್ಲಿ ಕಾನೂನಿನಿಂದ ಸಮರ್ಥನೀಯವಾಗಿದೆಯೆಂದು ತಾನು ನಂಬುವ ಸಂಗತಿಯ ತಪ್ಪು ಗ್ರಹಿಕೆಯಿಂದ ಮಾಡಿದ ಅಥವಾ ಮಾಡಲಾಗಿದೆಯೆಂದು ನಂಬುವ ಯಾವುದೇ ಕಾರ್ಯ.

**81-ಬಿ. ಕಂಪನಿಯಿಂದ ಅಪರಾಧಗಳು.-** (1) ಈ ಅಧಿನಿಯಮದ ಅಡಿಯಲ್ಲಿಯ ಅಪರಾಧವನ್ನು ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ವ್ಯವಹರಣೆಗಳ ನಿರ್ವಹಣೆಗಾಗಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಆ ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ತನ್ನ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, (1)ನೇ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವನ್ನು ತಡೆಗಟ್ಟಲು ತಾನು ಯಥೋಚಿತವಾದ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾವೊಬ್ಬ ವ್ಯಕ್ತಿಯು ರುಜುವಾತುಪಡಿಸಿದರೆ, ಯಾವುದೇ ಶಿಕ್ಷೆಗೆ ಅಂಥ ವ್ಯಕ್ತಿಯನ್ನು ಗುರಿಯಾಗುವಂತೆ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಅಪರಾಧವು ಸಂಭವಿಸಿತೆಂದು ಹೇಳಬಹುದಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ತನ್ನ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ:-** ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) ``ಕಂಪನಿ'' ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಘವು ಒಳಗೊಳ್ಳುತ್ತದೆ; ಮತ್ತು,

(ಬಿ) ಫರ್ಮ್‌ಗೆ ಸಂಬಂಧಿಸಿದಂತೆ ``ನಿರ್ದೇಶಕ'' ಎಂದರೆ ಫರ್ಮ್‌ನಲ್ಲಿನ ಪಾಲುದಾರ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



The above translation of the Registration (Karnataka Amendment) Act, 2023 (Karnataka Act 47 of 2024) shall be authoritative text in Kannada language under section 6 of the Kannada Language Comprehensive Development Act, 2022 (Karnataka Act No.13 of 2023).

**ಥಾವರ್‌ಚಂದ್ ಗೆಹ್ಲೋಟ್**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH

## ನವೆಂಬರ್ 01 ರ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಮಾನ್ಯ ಮುಖ್ಯಮಂತ್ರಿಯವರ ಭಾಷಣ ತಯಾರಿಸಲು ಭಾಷಾಂತರ ನಿರ್ದೇಶನಾಲಯಕ್ಕೆ ಸಂಬಂಧಪಟ್ಟ ಮಾಹಿತಿ

ಭಾಷಾಂತರ ನಿರ್ದೇಶನಾಲಯವು, ಕರ್ನಾಟಕ ರಾಜಭಾಷಾ ಅಧಿನಿಯಮ, 1963ರ 5ನೇ ಪ್ರಕರಣದ (ಎ) ಖಂಡದ ಅನ್ವಯ ಆಂಗ್ಲ ಭಾಷೆಯಲ್ಲಿರುವ ಕರ್ನಾಟಕ ರಾಜ್ಯ ಅಧಿನಿಯಮಗಳ ಹಾಗೂ ಅವುಗಳ ಅಡಿಯಲ್ಲಿ ರಚಿಸಿರುವ ನಿಯಮಗಳ ಕನ್ನಡ ಭಾಷಾಂತರವನ್ನು ಹಾಗೂ ಅಧಿಕೃತ ಪಾಠಗಳು (ಕೇಂದ್ರ ಕಾನೂನುಗಳು) ಅಧಿನಿಯಮದ 1973ರ 2ನೇ ಪ್ರಕರಣದ (ಎ) ಖಂಡದ ಅನ್ವಯ, ಆಂಗ್ಲ ಭಾಷೆಯಲ್ಲಿರುವ ಕೇಂದ್ರ ಅಧಿನಿಯಮಗಳ ಕನ್ನಡ ಭಾಷಾಂತರವನ್ನು ಸಿದ್ಧಪಡಿಸಿ ಅವುಗಳ ಅಧಿಕೃತ ಕನ್ನಡ ಆವೃತ್ತಿಗಳ ಪ್ರಕಟಣೆ ಮಾಡುವುದು. ಕರ್ನಾಟಕ ರಾಜ್ಯ ಸರ್ಕಾರದ ಭಾಷಾ ನೀತಿಗೆ ಅನುಗುಣವಾಗಿ ರಾಜ್ಯದ ಆಡಳಿತ ವರದಿಗಳು, ಸಮಿತಿಗಳ ವರದಿಗಳು, ವಿಚಾರಣಾ ಆಯೋಗದ ವರದಿಗಳು, ವಾರ್ಷಿಕ ವರದಿಗಳು, ಸರ್ಕಾರಿ ಆದೇಶಗಳು, ಅಧಿಸೂಚನೆಗಳು ಅಧಿಕೃತ ಜ್ಞಾಪನಗಳು ಮುಂತಾದವುಗಳನ್ನು ಹಾಗೂ ಸಚಿವಾಲಯದ ಇಲಾಖೆಗಳು ಮತ್ತು ಇತರೆ ಇಲಾಖೆಗಳ ಮುಖ್ಯಸ್ಥರುಗಳು ಕಳುಹಿಸಿಕೊಡುವ ಸರ್ಕಾರದ ಪ್ರಮುಖ ಸರ್ಕಾರಿ ಆದೇಶಗಳು, ಅಧಿಸೂಚನೆಗಳು, ನೋಟೀಸುಗಳು, ನಿಯಮಗಳು, ನ್ಯಾಯಿಕ ಆದೇಶಗಳು, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ವಿಶೇಷ ಅನುಮತಿ ಅರ್ಜಿಗಳಲ್ಲಿರುವ ವಿಷಯಗಳು ಎಂದರೆ ತೀರ್ಪುಗಳಲ್ಲಿರುವ ಹೇಳಿಕೆಗಳು, ಸಾಕ್ಷಿಗಳ ಹೇಳಿಕೆಗಳು, ಪಾಟೀ ಸವಾಲುಗಳು ಮುಂತಾದ ದಾಖಲೆಗಳು ಮತ್ತು ಇತರ ಇಲಾಖೆಗಳ ನ್ಯಾಯಿಕ ವಿಷಯಗಳನ್ನು ಕನ್ನಡ ಭಾಷೆಯಿಂದ ಆಂಗ್ಲ ಭಾಷೆಗೆ ಹಾಗೂ ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸುವುದು ಇಲಾಖೆಯ ಪ್ರಧಾನ ಕರ್ತವ್ಯವಾಗಿರುತ್ತದೆ

ಜನವರಿ 2024 ರಿಂದ ಇಲ್ಲಿಯವರೆಗೆ ಇಲಾಖೆಯಲ್ಲಿ ಸುಮಾರು 3002 ಪುಟಗಳಷ್ಟು ವಿವಿಧ ವಿಷಯಗಳನ್ನು ಇಂಗ್ಲೀಷಿನಿಂದ ಕನ್ನಡಕ್ಕೆ. ಹಾಗೂ ಸುಮಾರು 1455 ಪುಟಗಳಷ್ಟು ವಿವಿಧ ವಿಷಯಗಳನ್ನು ಕನ್ನಡದಿಂದ ಇಂಗ್ಲೀಷಿಗೆ ಭಾಷಾಂತರಿಸಿ ವಿಲೆ ಮಾಡಲಾಗಿದೆ

ಸುಮಾರು 4480 ಪುಟಗಳಷ್ಟು ರಾಜ್ಯ ನಿಯಮಗಳು/ ವಿಧೇಯಕಗಳನ್ನು ಕನ್ನಡಕ್ಕೆ ಭಾಷಾಂತರಿಸಲಾಗಿದೆ

ಸುಮಾರು 1060 ಪುಟಗಳಷ್ಟು ಕೇಂದ್ರ ಅಧಿನಿಯಮಗಳು ಮತ್ತಿತರ ವಿಷಯಗಳನ್ನು ಕನ್ನಡಕ್ಕೆ ಭಾಷಾಂತರಿಸಲಾಗಿದೆ

ಸಾಮಾನ್ಯ ಜನರ ಅನುಕೂಲಕ್ಕಾಗಿ ಸಿವಿಲ್ ಪ್ರಕ್ರಿಯಾ ಸಂಹಿತ, 1908 (CPC) ರ ದ್ವಿಭಾಷಾ ಆವೃತ್ತಿಯು ಸೇರಿದಂತೆ ಒಟ್ಟು 15 ಕೇಂದ್ರ ಅಧಿನಿಯಮಗಳನ್ನು ಕನ್ನಡ ಭಾಷೆಗೆ ಭಾಷಾಂತರಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ

ಕೇಂದ್ರ ಸರ್ಕಾರವು ಹೊಸದಾಗಿ ಜಾರಿಗೆ ತಂದಿರುವ ಭಾರತೀಯ ಸಾಕ್ಷ್ಯ ಅಧಿನಿಯಮ, ಭಾರತೀಯ ನ್ಯಾಯ ಸಂಹಿತೆ ಮತ್ತು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಅನುಮೋದನೆಗಾಗಿ ಕೇಂದ್ರ ಸರ್ಕಾರದ ಕಾನೂನು ಮತ್ತು ನ್ಯಾಯ ಮಂತ್ರಾಲಯದ ವಿಧಾಯೀ ವಿಭಾಗಕ್ಕೆ ಕಳುಹಿಸಲಾಗಿದೆ

ಪ್ರಸ್ತುತ ಮೇಲಿನ ಕೇಂದ್ರ ಕ್ರಿಮಿನಲ್ ಕಾನೂನುಗಳನ್ನು ಕನ್ನಡದಲ್ಲಿ ಪ್ರಕಟಿಸಲು ಮಾನ್ಯ ರಾಷ್ಟ್ರಪತಿಗಳ ಅಂಕಿತಕ್ಕಾಗಿ ಸಿದ್ಧತೆ ನಡೆಸಲಾಗಿದೆ

(ಎಂ. ವೆಂಕಟೇಶ)
ನಿರ್ದೇಶಕರು

## ಅನುಬಂಧ-1

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

1. 2024ನೇ ಸಾಲಿನಲ್ಲಿ 47 ಅಧಿನಿಯಮಗಳನ್ನು ಹೊರಡಿಸಲಾಗಿದೆ.
2. 2024ನೇ ಸಾಲಿನಲ್ಲಿ 39 ವಿಧೇಯಕಗಳನ್ನು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಮಂಡಿಸಿ ಅಂಗೀಕರಿಸಲಾಗಿದೆ.
3. 2024ನೇ ಸಾಲಿನಲ್ಲಿ 1 ಅಧ್ಯಾದೇಶವನ್ನು ಮಂಡಿಸಲಾಗಿದೆ.
4. ಕೇಂದ್ರ ಸರ್ಕಾರದ ಅಪರಾಧ ಕಾಯ್ದೆಗಳನ್ನು ಭಾಷಾಂತರ ಮಾಡಲು ಕ್ರಮವಹಿಸಲಾಗಿದೆ.
5. IPC ,CRPC ಮತ್ತು Indian Evidence (Act) ಕಾಯ್ದೆಗಳನ್ನು ಭಾಷಾಂತರ ಮಾಡಲು ಕ್ರಮವಹಿಸಲಾಗಿದೆ.
6. ಭಾರತೀಯ ನ್ಯಾಯ ಸಂಹಿತೆ ಮತ್ತು ಭಾರತೀಯ ನಾಗರೀಕ ಸುರಕ್ಷ ಸಂಹಿತೆಗಳನ್ನು ಭಾಷಾಂತರ ಮಾಡಲು ಕ್ರಮವಹಿಸಲಾಗಿದೆ.
7. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆಯುವ ಪರಿಶೀಲನಾ ಸಮಿತಿಯಲ್ಲಿ 76 ವಿಧೇಯಕಗಳನ್ನು ಪರಿಷ್ಕರಿಸಲಾಗಿದೆ.
8. 2024ನೇ ಸಾಲಿನಲ್ಲಿ ಈ ಇಲಾಖೆಯ ಅಂತರ್ಜಾಲವಾದ www.dpal.karnataka.gov.in ನಲ್ಲಿ ಅಧಿನಿಯಮಗಳು ಮತ್ತು ಅಧ್ಯಾದೇಶಗಳ ಶೀರ್ಷಿಕೆ ಅಡಿಯಲ್ಲಿ 47 ಅಧಿನಿಯಮಗಳು ಹಾಗೂ "ಅ" ಕಾರದ ಅಧಿನಿಯಮಗಳು ಮತ್ತು ಇಲಾಖಾವಾರು ಶೀರ್ಷಿಕೆ ಅಡಿಯಲ್ಲಿ ಅಳವಡಿಸಲಾಗಿದೆ.
9. ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಎಲ್ಲಾ ಕಾನೂನುಗಳು ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗುವಂತೆ ಅನುವಾಗಲು 1957ರಿಂದ ಇತ್ತೀಚಿನವರೆಗೆ ಆಗಿರುವ ಎಲ್ಲಾ ತಿದ್ದುಪಡಿಗಳನ್ನು ಇಂದೀಕರಿಸಿ, ಈ ಇಲಾಖೆಯ ವೆಬ್‌ಸೈಟ್ www.dpal.karnataka.gov.in ನಲ್ಲಿ ಅಳವಡಿಸಲಾಗಿದೆ.
10. India Code Web Portal ನಲ್ಲಿ ಇಲ್ಲಿಯವರೆಗೂ ಒಟ್ಟು 804 ಅಧೀನ ಶಾಸನಗಳು (ನಿಯಮಗಳು, ವಿನಿಮಯಗಳು, ಉಪವಿಧಿಗಳು) ಆಯಾ ಅಧಿನಿಯಮಗಳಡಿಯಲ್ಲಿ ಅಳವಡಿಸಲಾಗಿದೆ.
11. 48 ಕೇಂದ್ರ ಅಧಿನಿಯಮಗಳು, 01 ಅಧ್ಯಾದೇಶ ಮತ್ತು 33 ಕೇಂದ್ರ ನಿಯಮಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಮರುಪ್ರಕಟಿಸಲಾಗಿದೆ.
12. 14 ಕೇಂದ್ರ ಅಧಿನಿಯಮಗಳು, ಅಧ್ಯಾದೇಶ ಮತ್ತು ಕೇಂದ್ರ ನಿಯಮಗಳನ್ನು ಪುಸ್ತಕ ರೂಪದಲ್ಲಿ ಮುದ್ರಿಸಲಾಗಿದೆ.
13. 14 ಕೇಂದ್ರ ಅಧಿನಿಯಮಗಳನ್ನು the Authoritative Texts (Central Laws) Act, 1973ರ ಪ್ರಕರಣ 2(a) ರಡಿಯಲ್ಲಿ ಪ್ರಕಟಿಸಿದೆ.

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶನಿವಾರ, ೧೯, ಅಕ್ಟೋಬರ್, ೨೦೨೪(ಆಶ್ವಯುಜ, ೨೭, ಶಕವರ್ಷ, ೧೯೪೬)<br>BENGALURU, SATURDAY, 19, OCTOBER, 2024(AASHWAYUJA, 27, SHAKAVARSHA, 1946) | ಸಂ. ೪೮೦<br>No. 480 |
|---|---|---|


## DEPARTMENT OF PARLIAMENTARY AFFAIRS AND LEGISLATION SECRETARIAT

## NOTIFICATION

**NO: DPAL 24 SHASANA 2023, BENGALURU, DATED:19.10.2024**

The Registration (Karnataka Amendment) Bill, 2023 ಇದಕ್ಕೆ 2024ರ ಅಕ್ಟೋಬರ್ ತಿಂಗಳ 8ನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2024ರ ಕರ್ನಾಟಕ ಅಧಿನಿಯಮ ಸಂಖ್ಯೆ: 47 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**KARNATAKA ACT NO. 47 OF 2024**

(First Published in the Karnataka Gazette Extra-ordinary on the 19th day of October 2024)

## THE REGISTRATION (KARNATAKA AMENDMENT) ACT, 2023

(Received the assent of the President on the 8th day of October, 2024)

An Act further to amend the Registration Act, 1908 (Central Act 16 of 1908) in its application to the State of Karnataka.

Whereas, it is expedient further to amend the Registration Act, 1908 (Central Act 16 of 1908) in its application to the State of Karnataka for the purposes hereinafter appearing;

Be it enacted by the Karnataka State Legislature in the Seventy fourth Year of the Republic of India, as follows:-

**1. Short title and commencement.**- (1) This Act may be called the Registration (Karnataka Amendment) Act, 2023.

(2) It shall come into force on such date as the State Government may by notification in the Official Gazette, appoint.

**2. Amendment of section 2.**- In section 2 of the Registration Act, 1908 (Central Act 16 of 1908), (hereinafter referred to as the principal Act), after clause (10), the following shall be inserted, namely:-

"**(11) "Forged document"** shall have the same meaning as assigned to it in section 470 of the Indian Penal Code, 1860 (Central Act No. 45 of 1860)."

**3. Insertion of new sections 22-B, 22-C and 22-D.**- In the Principal Act, after section 22A, the following shall be inserted, namely:-

"**22-B. Refusal to register forged documents and other documents prohibited by law.**- Notwithstanding anything contained in this Act, the registering officer shall refuse to register the following documents, namely:-

(1) forged document;

(2) document relating to transaction, which is prohibited by any Central Act or State Act for the time being in force;

(3) document relating to transfer of immovable property by way of sale, gift, lease or otherwise, which is attached permanently or provisionally by a competent authority under any Central Act or State Act for the time being in force or any Court or Tribunal;

(4) any other document as the State Government may, by notification, specify.

**Explanation.**-

(a) "Forged document" shall have the same meaning as assigned to it in section 470 of the Indian Penal Code, 1860.

(b) For the purpose of considering the case of forged documents the cases involving question of title will be excluded.

**22-C. Cancellation of registered documents in certain cases.**- The District Registrar either suo motu or on a complaint received from any aggrieved person is of the opinion, that registration of a document is made in contravention of section 22-B shall issue a notice to the executants and all the parties to the document and parties to subsequent documents, if any, and all other persons who, in the opinion of the District Registrar, may be affected by the cancellation of the document, to show cause as to why the registration of the document shall not be cancelled. On consideration of reply, if any received therefor, the District Registrar may cancel the registration of the document and cause to enter such cancellation in the relevant books and indexes.

**Explanation.**-

(a) "Aggrieved person" means and includes any person being affected by the execution of the document and includes any party whose personal, property, or financial interests or rights are impacted by another's action and further in case of registration of a document pertaining to Government property includes any general public as the case may be.

(b) For determining the complaint the provision of Limitation Act as specified under Indian Limitation Act including the power to condone the delay in appropriate case on showing sufficient cause is entrusted upon the District Registrar or Appellate authority.

**22-D. Appeal.**- Any person aggrieved by an order of the District Registrar under section 22-C may prefer an appeal to the Inspector General of Registration within thirty days from the date of cancellation of the document and the Inspector General of Registration shall pass an order confirming, modifying or cancelling the order of the District Registrar."

**4. Amendment of section 69.**- In the principal Act, in section 69, in sub-section (1), after clause (l), the following shall be inserted, namely:-

"(m) regulating the process of cancellation of a registered document referred to in section 22-C."

**5. Insertion of new sections 81-A and 81-B.**- In the Principal Act, after section 81, the following shall be inserted, namely:-

"**81-A. Penalty for registering documents in contravention of section 22-B.**- (1) Every registering officer appointed under this Act and every person employed in his office for the purposes of this Act, who, being charged with registering the documents presented for registration under this Act, registers documents in contravention of the provisions of section 22-B, shall be punishable with imprisonment for a term which may be extend up to three years, or with fine, or with both.

(2) Nothing contained in this section shall apply in the case of registration of a document made in good faith.

**Explanation.**- For the purpose of this sub-section, the expression "good faith" means any act believed or done by a person in good faith with due care, caution and sense of responsibility or by mistake of fact believing himself justified by law under section 79 of the Indian Penal Code, 1860.

**81-B. Offences by companies.**- (1) Where an offence under this Act has been committed, by a company, every person who, at the time the offence was committed, was in-charge of, and was responsible to, the company for the conduct of the business of the company, as well as the company, shall be deemed to be guilty of the offence and shall be liable to be proceeded against and punished accordingly:

Provided that, nothing contained in sub-section (1) shall render any such person liable to any punishment, if he proves that the offence was committed without his knowledge or that he had exercised all due diligence to prevent the commission of such offence.

(2) Notwithstanding anything contained in sub-section (1), where any offence under this Act has been committed by a company and it is proved that the offence, has been committed with the consent or connivance of, or is attributable to, any neglect on the part of any director, manager, secretary or other officer of the company, such director, manager, secretary or other officer shall be deemed to be guilty of that offence and shall be, liable to be proceeded against and punished accordingly.

**Explanation.**- For the purposes of this section,-

(a) "company" means any body corporate and includes a firm or other association of individuals; and

(b) "director" in relation to a firm means a partner in the firm".

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**
**ಅಧಿಸೂಚನೆ**
**ಸಂಖ್ಯೆ: ಸಂವ್ಯಶಾಇ 24 ಶಾಸನ 2023, ಬೆಂಗಳೂರು, ದಿನಾಂಕ:19.10.2024.**

The Kannada Language Comprehensive Development Act, 2022 (Karnataka Act No. 13 of 2023)ರ ಪ್ರಕರಣ 6 ರಡಿಯಲ್ಲಿ ರಾಷ್ಟ್ರಪತಿಯವರಿಂದ ಅಧಿಕೃತಗೊಳಿಸಿದ the Registration (Karnataka Amendment) Act, 2023 (Karnataka Act 47 of 2024) ರ ಕನ್ನಡ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2024ರ ಕರ್ನಾಟಕ ಅಧಿನಿಯಮ ಸಂಖ್ಯೆ:47**
(2024 ರ ಅಕ್ಟೋಬರ್ ತಿಂಗಳ 19ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ನೋಂದಣಿ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2023**
(2024 ರ ಅಕ್ಟೋಬರ್ ತಿಂಗಳ 08 ನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16) ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ನೋಂದಣಿ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16) (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 2ನೇ ಪ್ರಕರಣದಲ್ಲಿನ ಖಂಡ (10)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(11) **"ಸುಳ್ಳು ಸೃಷ್ಟನೆಯ ದಸ್ತಾವೇಜು"** ಎಂಬ ಪದವು, ಭಾರತ ದಂಡ ಸಂಹಿತೆ, 1860 (1860ರ ಕೇಂದ್ರ ಅಧಿನಿಯಮ ಸಂ.45)ರ 470ನೇ ಪ್ರಕರಣದಲ್ಲಿ ಅದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

**3. ಹೊಸ ಪ್ರಕರಣ 22-ಬಿ, 22-ಸಿ ಮತ್ತು 22-ಡಿಯ ಸೇರ್ಪಡೆ.-** ಮೂಲ ಅಧಿನಿಯಮದಲ್ಲಿನ 22-ಎ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**22-ಬಿ. ಸುಳ್ಳು ಸೃಷ್ಟನೆಯ ದಸ್ತಾವೇಜುಗಳನ್ನು ಹಾಗೂ ಕಾನೂನಿನ ಮೂಲಕ ನಿಷೇಧಿಸಲಾದ ಇತರೆ ದಸ್ತಾವೇಜುಗಳನ್ನು ನೋಂದಣಿ ಮಾಡಲು ನಿರಾಕರಣೆ.-** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ ನೋಂದಣಿ ಅಧಿಕಾರಿಯು ಈ ಕೆಳಕಂಡ ದಸ್ತಾವೇಜುಗಳನ್ನು ನೋಂದಣಿ ಮಾಡಲು ನಿರಾಕರಿಸತಕ್ಕದ್ದು, ಎಂದರೆ:-

(1) ಸುಳ್ಳು ಸೃಷ್ಟನೆ ದಸ್ತಾವೇಜು;

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕೇಂದ್ರ ಅಧಿನಿಯಮ ಅಥವಾ ರಾಜ್ಯ ಅಧಿನಿಯಮದ ಮೂಲಕ ನಿಷೇಧಿಸಲಾಗಿದ್ದ ವ್ಯವಹರಣೆಗೆ ಸಂಬಂಧಿಸಿದ ದಸ್ತಾವೇಜು;

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕೇಂದ್ರ ಅಧಿನಿಯಮ ಅಥವಾ ರಾಜ್ಯ ಅಧಿನಿಯಮದ ಅಡಿಯಲ್ಲಿ ಸಕ್ಷಮ ಪ್ರಾಧಿಕಾರಿಯು ಅಥವಾ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು ಶಾಶ್ವತವಾಗಿ ಅಥವಾ ತಾತ್ಕಾಲಿಕವಾಗಿ ಜಪ್ತಿ ಮಾಡಲಾಗಿದ್ದ ಯಾವುದೇ ಸ್ವತ್ತನ್ನು ಮಾರಾಟ, ದೇಣಿಗೆ, ಗೇಣಿ ಅಥವಾ ಇತರ ರೂಪದಲ್ಲಿ ವರ್ಗಾವಣೆ ಮಾಡುವುದಕ್ಕೆ ಸಂಬಂಧಿಸಿರುವ ದಸ್ತಾವೇಜು;

(4) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ದಸ್ತಾವೇಜು.

**ವಿವರಣೆ:-**

(ಎ) "ಸುಳ್ಳು ಸೃಷ್ಟನೆಯ ದಸ್ತಾವೇಜು" ಎಂಬ ಪದಾವಳಿಯು ಭಾರತ ದಂಡ ಸಂಹಿತೆ, 1860ರ 470ನೇ ಪ್ರಕರಣದಲ್ಲಿ ಅವುಗಳಿಗೆ ಗೊತ್ತುಪಡಿಸಲಾದ ಅರ್ಥವನ್ನೇ ಹೊಂದಿರತಕ್ಕದ್ದು.

(ಬಿ) ಸುಳ್ಳು ಸೃಷ್ಟನೆಯ ದಸ್ತಾವೇಜುಗಳ ಪ್ರಕರಣವನ್ನು ಪರಿಗಣಿಸುವ ಉದ್ದೇಶಕ್ಕಾಗಿ, ಹಕ್ಕು ಸ್ವಾಮ್ಯ ಪ್ರಶ್ನೆಯನ್ನು ಒಳಗೊಂಡಿರುವ ಪ್ರಕರಣಗಳನ್ನು ಹೊರತುಪಡಿಸುವುದು.

**22-ಸಿ. ಕೆಲವು ಪ್ರಕರಣಗಳಲ್ಲಿ ನೋಂದಣಿ ಮಾಡಲಾದ ದಸ್ತಾವೇಜುಗಳ ರದ್ದತಿ.-** ಜಿಲ್ಲಾ ನೋಂದಣಾಧಿಕಾರಿಯು ಸ್ವಯಂ ಪ್ರೇರಣೆಯಿಂದಾಗಲಿ ಅಥವಾ ಯಾರೇ ಬಾಧಿತ ವ್ಯಕ್ತಿಯಿಂದ ಪಡೆದ ದೂರಿನ ಮೇಲಾಗಲಿ 22-ಬಿ ಪ್ರಕರಣವನ್ನು ಉಲ್ಲಂಘಿಸಿ ದಸ್ತಾವೇಜಿನ ನೋಂದಣಿ ಮಾಡಲಾಗಿದೆಯೆಂದು ಅಭಿಪ್ರಾಯಪಟ್ಟರೆ, ಆತನು ಬರೆದುಕೊಟ್ಟವರಿಗೆ ಮತ್ತು ದಸ್ತಾವೇಜಿನ ಎಲ್ಲಾ ಪಕ್ಷಕಾರರಿಗೆ ತರುವಾಯದ ದಸ್ತಾವೇಜುಗಳು ಯಾವುದಾದರೂ ಇದ್ದರೆ

ಅವುಗಳ ಪಕ್ಷಕಾರರಿಗೆ ಮತ್ತು ಜಿಲ್ಲಾ ನೋಂದಣಾಧಿಕಾರಿಯ ಅಭಿಪ್ರಾಯದಲ್ಲಿ ದಸ್ತಾವೇಜಿನ ನೋಂದಣಿಯನ್ನು ರದ್ದುಮಾಡುವುದರಿಂದ ಬಾಧಿತವಾಗಬಹುದಾದ ಎಲ್ಲಾ ಇತರೆ ವ್ಯಕ್ತಿಗಳಿಗೆ ದಸ್ತಾವೇಜಿನ ನೋಂದಣಿಯನ್ನು ಏಕೆ ರದ್ದುಮಾಡಬಾರದೆಂದು ಕಾರಣ ಕೇಳಿ ನೋಟೀಸನ್ನು ನೀಡತಕ್ಕದ್ದು. ಅದಕ್ಕಾಗಿ ಯಾವುದೇ ಉತ್ತರವನ್ನು ಸ್ವೀಕರಿಸಿದರೆ ಅದನ್ನು ಪರಿಗಣಿಸಿದ ತರುವಾಯ ಜಿಲ್ಲಾ ನೋಂದಣಾಧಿಕಾರಿಯು, ದಸ್ತಾವೇಜಿನ ನೋಂದಣಿಯನ್ನು ರದ್ದುಗೊಳಿಸಬಹುದು ಮತ್ತು ಸಂಬಂಧಪಟ್ಟ ಪುಸ್ತಕಗಳು ಹಾಗೂ ಸೂಚಿಗಳಲ್ಲಿ ಅಂಥ ರದ್ದತಿಯ ಬಗ್ಗೆ ನಮೂದು ಮಾಡುವಂತೆ ಮಾಡತಕ್ಕದ್ದು.

**ವಿವರಣೆ**:-

(ಎ) "ಬಾಧಿತ ವ್ಯಕ್ತಿ" ಎಂದರೆ ದಸ್ತಾವೇಜಿನ ಅಮಲ್ಜಾರಿಯಿಂದ ಬಾಧಿತನಾಗುವ ಯಾರೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ ಮತ್ತು ಇನ್ನೊಬ್ಬರ ಕ್ರಮದಿಂದ ಮತ್ತು ಸಂದರ್ಭಾನುಸಾರ, ಯಾರೇ ಸಾಮಾನ್ಯ ವ್ಯಕ್ತಿಯನ್ನು ಒಳಗೊಂಡು ಸರ್ಕಾರದ ಸ್ವತ್ತಿಗೆ ಸಂಬಂಧಿಸಿದಂತೆ ದಸ್ತಾವೇಜಿನ ನೋಂದಣಿಯ ಸಂದರ್ಭದಲ್ಲಿ ಯಾರ ವೈಯಕ್ತಿಕ, ಸ್ವತ್ತಿನ, ಅಥವಾ ಹಣಕಾಸಿನ ಹಿತಾಸಕ್ತಿಗಳು ಅಥವಾ ಹಕ್ಕುಗಳು ಬಾಧಿತವಾಗಿವೆಯೋ ಆ ಯಾರೇ ಪಕ್ಷಕಾರನನ್ನು ಒಳಗೊಳ್ಳುತ್ತದೆ.

(ಬಿ) ದೂರನ್ನು ನಿರ್ಧರಿಸುವುದಕ್ಕಾಗಿ ಸಮುಚಿತ ಪ್ರಕರಣದಲ್ಲಿ ಸಾಕಷ್ಟು ಕಾರಣವನ್ನು ತೋರಿಸಿದ ಮೇಲೆ ವಿಳಂಬವನ್ನು ಮನ್ನಾ ಮಾಡುವ ಅಧಿಕಾರವೂ ಸೇರಿದಂತೆ ಭಾರತೀಯ ಕಾಲಮಿತಿ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಕಾಲಮಿತಿ ಅಧಿನಿಯಮದ ಉಪಬಂಧವನ್ನು ಜಿಲ್ಲಾ ನೋಂದಣಾಧಿಕಾರಿ ಅಥವಾ ಅಪೀಲು ಪ್ರಾಧಿಕಾರಿಗೆ ವಹಿಸಲಾಗಿದೆ.

**22-ಡಿ. ಅಪೀಲು.-** 22-ಸಿ ಪ್ರಕರಣದಡಿಯಲ್ಲಿ ಜಿಲ್ಲಾ ನೋಂದಣಾಧಿಕಾರಿಯ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ದಸ್ತಾವೇಜಿನ ರದ್ದತಿಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ನೋಂದಣಿ ಮಹಾ ಪರಿವೀಕ್ಷಕರಿಗೆ ಅಪೀಲನ್ನು ಸಲ್ಲಿಸಬಹುದು ಮತ್ತು ನೋಂದಣಿ ಮಹಾ ಪರಿವೀಕ್ಷಕರು ಜಿಲ್ಲಾ ನೋಂದಣಾಧಿಕಾರಿಯ ಆದೇಶವನ್ನು ಸ್ಥಿರೀಕರಿಸಿ, ಮಾರ್ಪಡಿಸಿ ಅಥವಾ ರದ್ದುಗೊಳಿಸಿ ಆದೇಶವನ್ನು ಹೊರಡಿಸತಕ್ಕದ್ದು."

**4. ಪ್ರಕರಣ 69ರ ತಿದ್ದುಪಡಿ.-** ಮೂಲ ಅಧಿನಿಯಮದ 69ನೇ ಪ್ರಕರಣದಲ್ಲಿನ (1)ನೇ ಉಪಪ್ರಕರಣದಲ್ಲಿನ ಖಂಡ (ಎಲ್)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎಂ) ಪ್ರಕರಣ 22-ಸಿ ರಲ್ಲಿ ಉಲ್ಲೇಖಿಸಲಾದ ನೋಂದಾಯಿತ ದಸ್ತಾವೇಜಿನ ರದ್ದತಿಯ ಕಾರ್ಯವಿಧಾನವನ್ನು ನಿಯಂತ್ರಿಸುವುದು."

**5. 81-ಎ ಮತ್ತು 81-ಬಿ ಹೊಸ ಪ್ರಕರಣಗಳ ಸೇರ್ಪಡೆ.-** ಮೂಲ ಅಧಿನಿಯಮದ 81ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**81-ಎ. ಪ್ರಕರಣ 22-ಬಿಯನ್ನು ಉಲ್ಲಂಘಿಸಿದ ದಸ್ತಾವೇಜುಗಳ ನೋಂದಣಿಗಾಗಿ ದಂಡನೆ.-(1)** ಈ ಅಧಿನಿಯಮದಡಿಯಲ್ಲಿ ನೇಮಕಗೊಂಡ ಪ್ರತಿಯೊಬ್ಬ ನೋಂದಣಾಧಿಕಾರಿಯು ಮತ್ತು ಈ ಅಧಿನಿಯಮದಡಿಯಲ್ಲಿ ನೋಂದಣಿಗಾಗಿ ಹಾಜರುಪಡಿಸಲಾದ ದಸ್ತಾವೇಜುಗಳ ನೋಂದಣಿ ಮಾಡುವ ಪ್ರಭಾರವನ್ನು ಹೊಂದಿರುವ, ಈ ಅಧಿನಿಯಮದ ಉದ್ದೇಶಗಳಿಗಾಗಿ ತನ್ನ ಕಚೇರಿಯಲ್ಲಿ ನಿಯೋಜನೆಗೊಂಡಿರುವ ಪ್ರತಿಯೊಬ್ಬ ವ್ಯಕ್ತಿಯು 22-ಬಿ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ದಸ್ತಾವೇಜುಗಳನ್ನು ನೋಂದಣಿ ಮಾಡಿರುವಲ್ಲಿ ಅವರು ಮೂರು

ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಈ ಪ್ರಕರಣದಲ್ಲಿ ಏನೇ ಇದ್ದರೂ ಸದ್ಭಾವನೆಯಿಂದ ಮಾಡಲಾದ ದಸ್ತಾವೇಜಿನ ನೋಂದಣಿ ಸಂದರ್ಭದಲ್ಲಿ ಅನ್ವಯವಾಗತಕ್ಕದ್ದಲ್ಲ.

**ವಿವರಣೆ:-** ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ಸದ್ಭಾವನೆ" ಎಂದರೆ, ಒಬ್ಬ ವ್ಯಕ್ತಿಯು ಯುಕ್ತ ಜಾಗರೂಕತೆ, ಎಚ್ಚರಿಕೆ ಮತ್ತು ಜವಾಬ್ದಾರಿ ಪ್ರಜ್ಞೆಯಿಂದ ಸದ್ಭಾವನೆಯಲ್ಲಿ ಅಥವಾ ಭಾರತ ದಂಡ ಸಂಹಿತೆ, 1860ರ 79ನೇ ಪ್ರಕರಣದ ಅಡಿಯಲ್ಲಿ ಕಾನೂನಿನಿಂದ ಸಮರ್ಥನೀಯವಾಗಿದೆಯೆಂದು ತಾನು ನಂಬುವ ಸಂಗತಿಯ ತಪ್ಪು ಗ್ರಹಿಕೆಯಿಂದ ಮಾಡಿದ ಅಥವಾ ಮಾಡಲಾಗಿದೆಯೆಂದು ನಂಬುವ ಯಾವುದೇ ಕಾರ್ಯ.

**81-ಬಿ. ಕಂಪನಿಯಿಂದ ಅಪರಾಧಗಳು.-** (1) ಈ ಅಧಿನಿಯಮದ ಅಡಿಯಲ್ಲಿಯ ಅಪರಾಧವನ್ನು ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ವ್ಯವಹರಣೆಗಳ ನಿರ್ವಹಣೆಗಾಗಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಆ ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ತನ್ನ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, (1)ನೇ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದ ನಡೆಯಿತೆಂದು ಅಥವಾ ಅಂಥ ಅಪರಾಧವನ್ನು ತಡೆಗಟ್ಟಲು ತಾನು ಯಥೋಚಿತವಾದ ಜಾಗರೂಕತೆಯನ್ನು ವಹಿಸಿದ್ದನೆಂದು ಅಂಥ ಯಾವೊಬ್ಬ ವ್ಯಕ್ತಿಯು ರುಜುವಾತುಪಡಿಸಿದರೆ, ಯಾವುದೇ ಶಿಕ್ಷೆಗೆ ಅಂಥ ವ್ಯಕ್ತಿಯನ್ನು ಗುರಿಯಾಗುವಂತೆ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಅಪರಾಧವು ಸಂಭವಿಸಿತೆಂದು ಹೇಳಬಹುದಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ತನ್ನ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ:-** ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) ``ಕಂಪನಿ'' ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಘವು ಒಳಗೊಳ್ಳುತ್ತದೆ; ಮತ್ತು,

(ಬಿ) ಫರ್ಮ್ ಗೆ ಸಂಬಂಧಿಸಿದಂತೆ ``ನಿರ್ದೇಶಕ'' ಎಂದರೆ ಫರ್ಮ್‌ನಲ್ಲಿನ ಪಾಲುದಾರ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



The above translation of the Registration (Karnataka Amendment) Act, 2023 (Karnataka Act 47 of 2024) shall be authoritative text in Kannada language under section 6 of the Kannada Language Comprehensive Development Act, 2022 (Karnataka Act No.13 of 2023).

**ಥಾವರ್‌ಚಂದ್ ಗೆಹ್ಲೋಟ್**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH